ನೋವಾಯ್ತೇನು...? ದೇವಸ್ಥಾನದ ಮೀಟಿಂಗ್‌ನಲ್ಲಿ ನಿನ್ನನ್ನ ಶೆಡ್ಡಿಂದ ಓಡ್ಸೋ ಮಾತು ಬಂದದ್ದು ನಿಂಗೆ ಚಿಂತೆ ಆಗಿದ್ಯೇನು...? ಆದ್ರೆ, ಅವತ್ತೇ ನಿನ್ನ ಓಡ್ಸೋದು ಸರಿ ಇಲ್ಲ ಅಂತಾನೂ ಆಯ್ತಲ್ಲ... ಇನ್ಯಾತರ ಚಿಂತೆ ನಿಂಗೆ...'

'ಶೆಡ್ಡಿನ ಚಿಂತೆ ಇಲ್ಲ ಬಿಡ್ರಿ... ನಂಗೇ... ನನ್ನ ಮೈಯಿಗೆ ಛಂದಿಲ್ಲ... ಎಲ್ಲಾ ನೆಟ್ಟಗಾದೀತು ಬಿಡ್ರಿ... ನಡೀರಪ್ಪಾ... ನಾನು ಈಗ ಬಂದು ರಂಗೋಲಿ ಹಾಕ್ತೀನಿ...'

'ಇಲ್ಲ... ನಿನ್ನ ನೋಡದ್ರೆ ತುಂಬಾ ಸಿಕ್ ಆಗಿರೋ ಹಾಗಿದೆ... ಡಾಕ್ಟರಿಗೆ ಹೋಗಿ ತೋರ್‍ಸು...'

'ಬ್ಯಾಡ್ರೀ... ನಂಗ್ಯಾನೂ ಅಂತಾ ರೋಗ ಇಲ್ರೀ... ಡಾಟುರು ಏನೂ ಬೇಕಾಗಿಲ್ರೀ...'

'ಹಠ ಮಾಡ್ ಬೇಡ ಗಂಗಾ... ಈವತ್ತೇ ಹೋಗಿ ತೋರ್‍ಸು... ಈ ದಿನ ನೀನು ರೆಸ್ಟ್ ತಗೊ... ಕೆಲ್ಸಕ್ಕೆ ಬರ್‍ಬೇಡ... ನಾನೂ ಬೇರೆ ಯಾರಿಗಾದ್ರೂ ಹೇಳ್ತೀನಿ...'

ಮಾರನೇ ದಿನವೂ ಅವಳು ಕೆಲಸಕ್ಕೆ ಬರಲಿಲ್ಲ. ಅಂದು ಶನಿವಾರವಾಗಿತ್ತು. ತೇರು ಆದ ದಿನ ಬಂದಿದ್ದ ನಾಟೀ ಔಷಧಿಯವನು ಎಂದು ಹೇಳಿಕೊಂಡಾತ ಬಂದ. ಅವನನ್ನು ನೋಡಿದ ಕೂಡಲೇ ಶೀನಣ್ಣನಿಗೆ ಗಂಗಾಳ ಅಸ್ವಸ್ಥತೆ ನೆನಪಿಗೆ ಬಂದಿತು. ಈ ವೈದ್ಯನಿಗೇ ಅವಳನ್ನು ಏಕೆ ತೋರಿಸಬಾರದು ಎನ್ನಿಸಿತು.

ಗಂಗಳ ಊರಿನ ಕಡೆಯವನೇ ಆದ ಆ ಮನುಷ್ಯ, ದೇವರನ್ನು ಸೇವಿಸಿ ಹಿಂದಿರುಗಿ ಬಂದು ತನ್ನ ಚಪ್ಪಲಿ ಮೆಟ್ಟಿಕೊಳ್ಳುತ್ತಿದ್ದನ್ನು ನೋಡುತ್ತಲೇ ಶೀನಪ್ಪ ಬೇಗ ಹೋಗಿ ಅವನಿಗೆ ಹೇಳಿದ.

'ನಮಸ್ಕಾರ ವೈದ್ಯರೇ... ಆಯ್ತೇ ದರ್ಶನಾ...?'

ತನ್ನ ಹಳ್ಳಿಲಿ ನಾಲ್ಕನೇ ಕ್ಲಾಸು ಓದಿದ್ದರೂ, ರೋಗಿಗಳಿಗೆ ನಾಟೀ ಚಿಕಿತ್ಸೆ ಮಾಡುತ್ತಿದ್ದರೂ ಯಾರೂ 'ವೈದ್ಯ' ಪಟ್ಟ ಕೊಟ್ಟಿರಲಿಲ್ಲ. ಅವನಿಗೆ ಈಗ ಸ್ವಲ್ಪ ಖುಷಿಯಾಯಿತು. ಒಂದು ರೀತಿ ಗತ್ತು ತೆಗೆದುಕೊಂಡು.

'...ಹೊ...! ಯಾರೂ... ಶೀನಣ್ಣನೆ...? ಹ್ಯಾಂಗಿದ್ದೀರ್‍ರಿ?...' ಎಂದ.

'ನಾನು ಚೆನ್ನಾಗಿದೀನಿ... ಇಲ್ಲಿ... ಒಂದು ಹೆಂಗ್ಸಿಗೆ ಮತ್ತು ಅವಳ ಎಳೇ ಕೂಸಿಗೆ ಆರೋಗ್ಯ ಕೆಟ್ಟಿದೆ... ನೀವು ಬಂದು ನೋಡಿಪ್ಪಾ... ಅವ್ಳು ಅನಾಥೆ.. ಆಸ್ಪತ್ರೆಗೆ ಹೋಗೋಕೆ ಹಿಂದೇಟು ಹಾಕ್ತಾಳೆ... ಇಲ್ಲೇ ಸಮೀಪದಲ್ಲೇ ಅವ್ಳಿದ್ದಾಳೆ...'

'ಹಾಂಗಾ...? ನಡೀರ್‍ರೀ...'

ಅವರಿಬ್ಬರೂ ಶೆಡ್ಡಿನೊಳಗೆ ಹೋದಾಗ ಮಗು ಸೊರಗಿ, ತೇಲುಗಣ್ಣು ಮಾಡುತ್ತಾ ಹೆತ್ತವಳನ್ನು ಕಂಗಾಲು ಮಾಡಿದ್ದು ಸ್ಪಷ್ಟವಾಗಿ ಗೋಚರಿಸಿತ್ತು.

ಗಂಗಾ, ಕರುಳೇ ಬಾಯಿಗೆ ಬಂದಂತೆ ಕಣ್ಣೀರು ಸುರಿಸುತ್ತಾ, ಮಲಗಿಕೊಂಡು ಕೂಸಿಗೆ ಹಾಲುಡಲು ಯತ್ನಿಸುತ್ತಿದ್ದಳು. ಆದರೆ ಹಾಲು ಉಕ್ಕಿ ಬರುತ್ತಿರಲಿಲ್ಲ. ಒಣ ತೊಟ್ಟನ್ನು ಚೀಪಿ ಚೀಪಿ ಎಳೇ ಬಾಯಿ ಶಕ್ತಿಯನ್ನೆಲ್ಲಾ ನೀಗಿಕೊಂಡು, ಹಸಿವು ಅದನ್ನು ಮೆತ್ತಗಾಯಿಸಿತು. ತಾಯ ಜೀವ ಹೊಡೆದುಕೊಂಡಿತು. ಆ ಚಿಂತೆಯಲ್ಲಿ ಬಂದವರು ಅವಳ ಅರಿವಿಗೆ ಬರಲಿಲ್ಲ. ಆದರೆ ಬಂದವರು ಅಲ್ಲಿನ ಪರದಾಟವನ್ನು ಸ್ಪಷ್ಟವಾಗಿ ಕಂಡರು. ನಾಟಿ ವೈದ್ಯ ಕೆಳಮಟ್ಟದ ದನಿಯಲ್ಲಿ ಶೀನಣ್ಣನಿಗೆ ಹೇಳಿದ.

'ಕೂಸಿಗಿಂತಾ ತಾಯಿ ಪರಿಸ್ಥಿತಿಗೆ ಗಂಭೀರ ಅನ್ನಸ್ತೈತೆ... ನನ್ನ ಕೈಚೀಲದಾಗ ಕೆಲ ಓಷಧಿ ಮೂಲಿಕೆ, ಚೂರ್ಣ, ಪುಡಿಗಳನ್ನೆಲ್ಲಾ ಇಟ್ಕೊಂಡೇ ಇರ್‍ತೀನ್ರಿ... ಊರಿಂದ್ಲೇ ತಂದಿದ್ದಿ... ಹೋಗ್ರಿ ಶಿನಣ್ಣ... ಒಂದು ನಾಲ್ಕು ಚಮಚೆ ಜೇನುತುಪ್ಪ ಎಲ್ಲಿಂದ್ಲಾದ್ರೂ ತರ್‍ರೀ...'

'ಜೇನುತುಪ್ಪ ತಾನೆ...? ಅದ್ದು ಪುರೋಹಿತ್ರ ಮನೇಲೆ ಇರ್‍ತದೆನೊ... ಇಲ್ದಿದ್ರೂ ಎಲ್ಲಾರೆ ಸಿಗ್ತದೆ ಬಿಡಿ...'

'ಹಾಂಗ್ ಮಾಡ್ರೀ...' ಎಂದು ಶೀನಣ್ಣನನ್ನು ಆಚೆಗೆ ಕಳುಹಿಸಿ ತಾನು, ತನ್ನ ಹೆಂಡತಿ ಎನ್ನಿಸಿಕೊಳ್ಳಬೇಕಾಗಿದ್ದ ಗಂಗೆ ಬಳಿಗೇ ಹೋದ.

ಅವಳು ದೆವ್ವ ಹಿಡಿದವಳಂತೆ ಕಂಡಳು. ಕೆದರಿ ಬುಟ್ಟೆಯಾಗಿದ್ದ ಹೊರೆ ಕೂದಲು, ಅರ್ಧ ಸೀಟಿ ಹೊದ ದೊಡ್ಡ ಕೆಂಪು ಕುಂಕುಮ, ಬಿರಿದು ಹೋದ ಕಣ್ಣುಗಳು...

ಅವನನ್ನು ಮತ್ತೆ ಕಂಡಾಗ ಆ ಬಿರಿಗಣ್ಣುಗಳಲ್ಲಿ ಭೀತಿ ಆವರಿಸಿಕೊಂಡಿತು. ಬಂದವನೇ ಮಗುವನ್ನು ಎತ್ತಿಕೊಂಡ! ಅವಳಿಗೆ ಜೀವ ಬಾಯಿಗೆ ಬಂದಿತು. ಕೂಸಿಗೆ ಏನು ಮಾಡಿಬಿಡುವನೋ! ತೇರಿನ ವೇಳೆ ಅವನನ್ನು ಕಂಡಾಗಿಂದ ಅವಳಿಗೆ ಭಯ. ಆತ ಅಳಲೂ ಶಕ್ತಿ ಇರದ ಆ ಕೂಸಿನ ಅಂಗಿ ಮೇಲೆ ಮಾಡಿ ಹೊಟ್ಟೆ ಮೇಲೆ ಕೈಯಾಡಿಸಿದ.

ಅದು ತೆಳ್ಳಗೆ ಎಲೆಯಂತಾಗಿತ್ತು. ಹಸಿವಿನ ತೀವ್ರತೆ ಸ್ಪಷ್ಟವಾಗಿ ಕಾಣುತ್ತಿತ್ತು. ಅದನ್ನೆತ್ತಿಕೊಂಡೇ ಒಲೆ ಬುಡಕ್ಕೆ ಹೋದ. ಇನ್ನೂ ಬಾಣಂತನದ ಬಿಸಿ ನೀರನ್ನೇ ತೆಗೆದುಕೊಳ್ಳುತ್ತಿದ್ದ ಗಂಗೆಯ ಕುಡಿಯುವ ನೀರು ಬೆಂಬೂದಿಯಿಂದಾಗಿ ಉಗುರು ಬೆಚ್ಚಗೇ ಇತ್ತು. ಆ ಸಿಲಿವಾರದ ಪಾತ್ರೆಯ ನೀರಿಗೆ ತನ್ನ ವಸ್ತ್ರದ ತುದಿ ಅದ್ದಿ ತೆಗೆದು ಮಗುವಿನ ಬಾಯಿಗೆ ಹಿಂಡಿದ. ಒಂದಷ್ಟು ಹನಿ ನೀರು ಅದರ ಹೊಟ್ಟೆಗೆ ಹೋಗುವಂತೆ ಮಾಡಿದ.

ಮೊದಲ ಮಳೆ ಬಿದ್ದಾಗ, ಬಿಸಿಲ ಕಾಲದ ಎಳೇ ಸಸಿ ಚೈತನ್ಯ ಪಡೆಯುವುದನ್ನು ನಾವು ಕಣ್ಣಾರೆ ಕಾಣುವಂತೆ ಆ ಕಂದ ಚೇತರಿಸಿಕೊಂಡಿತು. ತನ್ನ ಚೀಲದಿಂದ ಸಣ್ಣ ಪೊಟ್ಟಣ ತೆಗೆದು, ಅದರಲ್ಲಿದ್ದ ಯಾವುದೊ ಪುಡಿಯನ್ನು ನೀರಿಗೆ ಕಲಸಿ ಕೂಸಿಗೆ ಚೀಪಿಸಿದ.

ಮಗು ಸುಧಾರಿಸಿಕೊಂಡ ಮೇಲೆ ಅದನ್ನು ಹರಕು ಬಟ್ಟೆಯ ಜೋಲಿಯಲ್ಲಿ ಮಲಗಿಸಿ ಗಂಗಾ ಕಡೆ ನೋಡಿದ.

'ನೋಡು...! ನಾ ಕಲ್ತ ನಾಟೀ ಓಷಧ ಈಗ ಸಮಯಕ್ಕ ಬರೊ ಹಂಗಾತು...!' ಎಂದ ಹಲ್ಲು ಕಿರಿದ. 'ಹೆಂಡ್ತಿ ನನ್ನವ್ಳಾದ್ರೂ, ಅವ್ಳು ಹೆತ್ತ ಕೂಸು ನಂದಲ್ಲ... ಇರ್‍ಲಿ ಬಿಟ್ಹಾಕು. ಬ್ಯಾರೇವ್ರ ಕೂಸು ನಾನಾ ಉಳಸದ್ಲಲ್ಲ...!'

ಗಂಗ ಕ್ಷೀಣ ದನಿಯಲ್ಲಿ ಅಂದಳು 'ಉಪಕಾರ ಆತು...! ಅದ್ರ ಮೇಲೆ ನಿನಗ ಸಿಟ್ಟು, ದ್ವೇಷ ಇಲ್ಲ ತಾನೆ...?'

'ಹುಚ್ಚು ಖೋಡೀ... ಹಂಗ್ಯಾಕೆ ಹೇಳ್ಳಿಕ್ಕೆ ಹತ್ತೀ...?

ಅದಾ... ಅರೀದ ಕೂಸು... ಅದ್ರ ಮ್ಯಾಲೆ ದ್ವೇಷ ಮಾಡಿ ಯಾನಾರ ಉಪಯೋಗ ಅದೇನಾ...? ಜಡ್ಡಾದವರಿಗೆ, ಸಾಯೋರಿಗೆ ಕೈಲಾದ ಉಪಚಾರ ಮಾಡೋದು ನನ್ನ ಕರ್ತವ್ಯ ಅಲ್ಲೇನ.... ಇದು ನನ್ನ ಕೂಸು ಅಲ್ಲ. ಆದ್ರ ಸಾಯೋ ಮಟ್ಟಕ್ಕ ಬರ್‍ಲಿಕ್ ಹತ್ತಿತ್ತು... ಉಳಿಸಿದ್ನಿ... ಆಟು ಸಾಕು ನನಗ...'

ಅವಳು ಮಗುವಿನತ್ತ ನೋಡಿದಳು. ಅದಾಗಲೇ ನೆಮ್ಮದಿಯಿಂದ ನಿದ್ರೆಗೆ ಜಾರಿತ್ತು.

ಶಿವಣ್ಣ ಗಂಗೆ ಕೈ ಹಿಡಿದು ನಾಡಿ ನೋಡಿದ. ಕಣ್ಣ ರೆಪ್ಪೆ ಅರಳಿಸಿ ಕಣ್ಣು ನೋಡಿದ. ಅವಳನ್ನು ಹುಡುಕಿಕೊಂಡು ಊರು ತೊರೆದು ಬಂದಿದ್ದನಲ್ಲವೇ?



## ಇಲ್ಲಿಯವರೆಗೆ

ದೇವಸ್ಥಾನ ಸಮಿತಿ ಮೀಟಿಂಗ್ ನಡೆಯುತ್ತದೆ. ಸಮಿತಿಯ ಅಧ್ಯಕ್ಷೆ ಸುನಂದ ಬನ್ನಪ್ಪ ಸಭೆಯಲ್ಲಿ ಮಾತನಾಡುತ್ತಾರೆ. ಗಂಗಾ ಇದ್ದ ಶೆಡ್ ಅನ್ನು ತೆರವುಗೊಳಿಸಬೇಕು ಎಂಬ ಬಗ್ಗೆ ಚರ್ಚೆ ನಡೆಯುತ್ತದೆ. ಆಕೆ ದೇವಸ್ಥಾನ ಶುಚಿ ಮಾಡುವ ಕೆಲಸ ಮಾಡುತ್ತಾಳೆ, ಜತೆಗೆ ಆಕೆಗೆ ಗಂಡನ ಆಸರೆಯೂ ಇಲ್ಲ ಎಂಬ ಮಾತನ್ನು ಸಭೆಯಲ್ಲಿ ಸದಸ್ಯನೊಬ್ಬ ಹೇಳುತ್ತಾನೆ. ಸಭೆ ನಡೆಯುವ ಸಮಯದಲ್ಲಿ ಮಗುವಿಗೆ ಹಾಲು ಕುಡಿಸುತ್ತಿದ್ದ ಗಂಗಾ ತೆರೆಯ ಮರೆಯಲ್ಲಿ ನಿಂತು ಮಾತುಗಳನ್ನು ಕೇಳಿಸಿಕೊಳ್ಳುತ್ತಾಳೆ. ಈಕೆಗೆ ಕೆಲಸ ಹೋಗುತ್ತದೆ ಎಂಬ ಆತಂಕ ಉಂಟಾಗುತ್ತದೆ. ಕೊನೆಗೆ ಆಕೆಯನ್ನು ನಿರಾಶ್ರಿತಳನ್ನಾಗಿ ಮಾಡುವುದು ಸರಿಯಲ್ಲ ಎಂಬ ತೀರ್ಮಾನಕ್ಕೆ ಸಭೆ ಬರುತ್ತದೆ. ಈ ಮಧ್ಯೆ ಪ್ರಸಾದ ಭಟ್ಟನಿಗೆ ಅಮೆರಿಕಕ್ಕೆ ಹೋಗುವ ಆಫರ್ ಬರುತ್ತದೆ.